— ! ವಿಜಯ ಕರ್ನಾಟಕ ! — ಗುರುವಾರ, 8 ಅಕ್ಟೋಬರ್, 2015, ಪುಟ ಸಂಖ್ಯೆ - 09

ಆರ್ಥಿಕ ಸಂಪನ್ಮೂಲ: ಇತರ ವಿವಿಗಳಿಗೆ ವಿಟಿಯು ಮಾದರಿ

■ **ಶಿವರಾಮ್** ಬೆಂಗಳೂರು

ಪ್ರತಿ ವರ್ಷ ಸಾವಿರಾರು ಎಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಸೃಷ್ಟಿಸುವ ಪ್ರತಿಷ್ಠಿತ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು), ಆಂತರಿಕ ಸಂಪನ್ಮೂಲ ಕ್ರೋಡೀಕರಣದಲ್ಲೂ ಸ್ವಾವಲಂಬನೆ ಸಾಧಿಸುವ ಮೂಲಕ ರಾಷ್ಟ್ರದ ಇತರೆ ವಿವಿಗಳಿಗೆ ಮಾದರಿ ಎನಿಸಿದೆ.

ಐಐಟಿ, ಐಐಎಸ್ಸಿ, ಐಐಎಂನಂತಹ ಸಂಸ್ಥೆಗಳು ಕೂಡ ಸಂಪೂರ್ಣ ಸರಕಾರದ ನೆರವಿನಿಂದಲೇ ಬೆಳವಣಿಗೆ ಕಾಣುತ್ತಿವೆ. ಆದರೆ, 203 ಕಾಲೇಜುಗಳು, 4 ಲಕ್ಷ ವಿದ್ಯಾರ್ಥಿಗಳು, 25 ಸಾವಿರ ಪ್ರಾಧ್ಯಾಪಕರನ್ನು ಒಳಗೊಂಡಿರುವ ವಿಟಿಯು, ಸುಮಾರು 750 ಕೋಟಿ ರೂ.ಗಳಷ್ಟು ಆಂತರಿಕ ಸಂಪನ್ಮೂಲ ಕ್ರೋಢೀಕರಿಸುವ ಮೂಲಕ ಕೇಂದ್ರ ಅಥವಾ ರಾಜ್ಯ ಸರಕಾರಗಳ ನಯಾಪೈಸೆ ನೆರವಿಲ್ಲದೆ ಹೆಮ್ಮರವಾಗಿ ಬೆಳೆಯುತ್ತಿದೆ. ಮೈಸೂರು ಹಾಗೂ ಕಲಬುರಗಿ ಪ್ರಾದೇಶಿಕ ಕಚೇರಿಗಳ ವ್ಯಾಪ್ತಿಯಲ್ಲಿ ಹತ್ತಾರು ವರ್ಷಗಳಿಂದ ನನೆಗುದಿಗೆ ಬಿದ್ದಂತಹ ನಾನಾ ಕಟ್ಟಡ ಕಾಮಗಾರಿಗಳಿಗೆ ವೇಗದ ಸ್ಪರ್ಶ ನೀಡುವ ಮೂಲಕ ಕ್ಯಾಂಪಸ್‌ಗಳ ರೂಪವನ್ನೇ ಬದಲಿಸುವಲ್ಲಿ ವಿವಿ ಕುಲಪತಿ ಡಾ.ಎಚ್. ಮಹೇಶಪ್ಪ ಪ್ರಮುಖ ಪಾತ್ರ ವಹಿಸಿದ್ದಾರೆ. 2010ರಿಂದೀಚೆಗೆ ವಿವಿಯು ಅಭಿವೃದ್ಧಿ ಜತೆಗೆ, ಆಸ್ತಿ-ಪಾಸ್ತಿ ಮೌಲ್ಯ ವೃದ್ಧಿಸುವಲ್ಲಿಯೂ ಗಮನಾರ್ಹ ಸಾಧನೆ ಮಾಡಿದೆ.

■ **ಜನವರಿ-ಫೆಬ್ರವರಿಯಲ್ಲಿ ರಾಷ್ಟ್ರಕ್ಕೆ ಸಮರ್ಪಣೆ**

'ಭಾರತ ರತ್ನ' ಸರ್ ಎಂ. ವಿಶ್ವೇಶ್ವರಯ್ಯ ಜನಿಸಿದ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ 200 ಎಕರೆ ಜಾಗ ಪಡೆಯುವ ಮೂಲಕ ಅಲ್ಲೊಂದು ಸುಸಜ್ಜಿತವಾದ ವಿವಿ ಕ್ಯಾಂಪಸ್ ಸಜ್ಜುಗೊಳಿಸಲಾಗುತ್ತಿದೆ. 2016ರ ಜನವರಿ ಅಥವಾ ಫೆಬ್ರವರಿ ವೇಳೆಗೆ ರಾಷ್ಟ್ರಪತಿ ಅಥವಾ ಪ್ರಧಾನಿಗಳನ್ನು ಕರೆಸಿ ಈ ಕ್ಯಾಂಪಸ್ ಅನ್ನು ರಾಷ್ಟ್ರಕ್ಕೆ ಸಮರ್ಪಿಸಲು ಉದ್ದೇಶಿಸಲಾಗಿದೆ.

ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಪಿ.ಎಚ್‌ಡಿ ಮಾಡುವ ಸಂಶೋಧನಾ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಇಲ್ಲಿ ಸಂಶೋಧನೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಒಂದು ರೀತಿಯಲ್ಲಿ ಕೈಗಾರಿಕಾ ಕ್ಯಾಂಪಸ್ ಅನ್ನಾಗಿ ಪರಿವರ್ತಿಸಬೇಕೆಂಬುದು ನಮ್ಮ ಉದ್ದೇಶ ಎನ್ನುತ್ತಾರೆ ಕುಲಪತಿ ಡಾ.ಎಚ್. ಮಹೇಶಪ್ಪ.

ಕೈಗಾರಿಕೆ, ಆಟೋಮೊಬೈಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಂಜಿನಿಯರಿಂಗ್ ಸೇರಿದಂತೆ ನಾನಾ ಕ್ಷೇತ್ರಗಳ ಸುಮಾರು 80ರಿಂದ 100 ಉದ್ಯಮಗಳ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರಗಳನ್ನು ಕ್ಯಾಂಪಸ್‌ನಲ್ಲಿ ತೆರೆಯಲು ಅವಕಾಶ ಕಲ್ಪಿಸುವ ಮೂಲಕ ಕಂಪನಿಗಳ ಸಹಕಾರದೊಂದಿಗೆ ಪ್ರಾತ್ಯಕ್ಷಿಕೆಗಳೊಂದಿಗೆ ವಿದ್ಯಾರ್ಥಿಗಳ ಸಂಶೋಧನೆಗೆ ಅನುಕೂಲ ಮಾಡಿಕೊಡಲಾಗುತ್ತಿದೆ. ಇದಕ್ಕಾಗಿ ಸ್ಮಾರ್ಟ್ ಟೆಕ್ನೋ ಕೇಂದ್ರ ಹಾಗೂ ಟೆಕ್ನಾಲಜಿ ಪಾರ್ಕ್ ನಿರ್ಮಿಸಲು ಕೂಡ ವಿವಿ ಉದ್ದೇಶಿಸಿದೆ. ''ಉಪಗ್ರಹಗಳು ಅಥವಾ ರೋಬೋಟ್‌ಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದರ ಬಗ್ಗೆ ವಿದ್ಯಾರ್ಥಿಗಳಿಗೆ ಕಲ್ಪನೆಯೇ ಇಲ್ಲ. ಪ್ರತ್ಯಕ್ಷವಾಗಿ ಅವುಗಳ ಕಾರ್ಯಚಟುವಟಿಕೆಯನ್ನು ಗಮನಿಸುವುದರಿಂದ ಹೊಸ ಹೊಸ ಆವಿಷ್ಕಾರ ನಡೆಸಲು ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಇದರಿಂದ ವಿದ್ಯಾರ್ಥಿಗಳು ಉದ್ಯಮಿಗಳಾಗಿಯೂ ರೂಪುಗೊಳ್ಳಲು ಸಹಕಾರಿಯಾಗಲಿದೆ,'' ಎಂದು ಅವರು ಹೇಳಿದರು.

ಸುಮಾರು 200 ಕೋಟಿ ರೂ. ವೆಚ್ಚದಲ್ಲಿ ಇಲ್ಲಿ ಕ್ಯಾಂಪಸ್ ತಲೆಯೆತ್ತುತ್ತಿದೆ. ಮೊದಲ ಹಂತದಲ್ಲಿ ಸುಮಾರು 100 ಕೋಟಿ ರೂ. ವೆಚ್ಚದಲ್ಲಿ ಎರಡು ಪಿಜಿ ಬ್ಲಾಕ್, ಬಾಲಕರ ಹಾಗೂ ಬಾಲಕಿಯರ ಹಾಸ್ಟೆಲ್, ಮೆಸ್ ಬ್ಲಾಕ್, ಎರಡನೇ ಹಂತದಲ್ಲಿ 25-30 ಕೋಟಿ ರೂ. ವೆಚ್ಚದಲ್ಲಿ ಒಂದು ಪಿಜಿ ಬ್ಲಾಕ್, ಹೆಚ್ಚುವರಿ ಬಾಲಕರ ಹಾಸ್ಟೆಲ್, ಗ್ರಂಥಾಲಯ, ಆಡಳಿತ ಕಚೇರಿ ಕಟ್ಟಡ, ಅತಿಥಿಗೃಹ ನಿರ್ಮಾಣ ಮಾಡಲಾಗುತ್ತಿದೆ. ಮೂರನೇ ಹಂತದಲ್ಲಿ ಅಟೆಂಡರ್‌ಗಳಿಂದ ಹಿಡಿದು ನಿರ್ದೇಶಕರವರೆಗೆ ವಸತಿಗೃಹಗಳ ಬ್ಲಾಕ್ ಹಾಗೂ ಸಾವಿರ ಆಸನಗಳ ಆಡಿಟೋರಿಯಂ ನಿರ್ಮಿಸಲು ಉದ್ದೇಶಿಸಲಾಗಿದೆ.

■ **ನಂದಿ ಬೆಟ್ಟದ ಬಳಿ ಇಂಧನ ಪಾರ್ಕ್**

ಇಂಧನ ಉತ್ಪಾದನೆಯಲ್ಲೂ ಸ್ವಾವಲಂಬನೆ ಸಾಧಿಸುವ ಉದ್ದೇಶದಿಂದ ನಂದಿಬೆಟ್ಟದ ಸನಿಹ ಪವನ ವಿದ್ಯುತ್ ಹಾಗೂ ಸೋಲಾರ್ ವಿದ್ಯುತ್ ಉತ್ಪಾದಿಸುವಂತಹ ಇಂಧನ ಪಾರ್ಕ್ ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿದೆ.

ವಿವಿಗೆ ಅಗತ್ಯವಿರುವಷ್ಟು ವಿದ್ಯುತ್ ಬಳಕೆ ಮಾಡಿಕೊಂಡು, ಹೆಚ್ಚುವರಿ ವಿದ್ಯುತ್ ಅನ್ನು ಜಾಲಕ್ಕೆ ಪೂರೈಸುವ ಮೂಲಕ ಸುತ್ತಮುತ್ತಲಿನ ಹಳ್ಳಿಗಳಿಗೂ ಪೂರೈಸಲು ಚಿಂತಿಸಲಾಗುತ್ತಿದೆ ಎಂದು ಕುಲಪತಿ ತಿಳಿಸಿದರು.

■ **ಕೈಗಾರಿಕೆಗಳಿಗೆ ಪೂರಕವಾದ ಶಿಕ್ಷಣ**

ತಾಂತ್ರಿಕ ಕಾಲೇಜುಗಳು ಔದ್ಯೋಗೀಕರಣಕ್ಕೆ ಪೂರಕವಾದ ಶಿಕ್ಷಣ ನೀಡುತ್ತಿಲ್ಲ ಎಂಬುದು ಕೈಗಾರಿಕೋದ್ಯಮಿಗಳ ಸಾರ್ವತ್ರಿಕ ದೂರಾಗಿತ್ತು. ಎಂಜಿನಿಯರಿಂಗ್‌ನ 1ರಿಂದ 8ನೇ ಸೆಮಿಸ್ಟರ್‌ವರೆಗಿನ 48 ವಿಷಯಗಳ ಪಠ್ಯಕ್ರಮ ಅಪ್ರಸ್ತುತವಾಗಿದೆ ಎಂಬ ಉದ್ಯಮಿಗಳ ಕೊರಗನ್ನು ಇದೀಗ ನಿವಾರಿಸಿರುವ ವಿಟಿಯು, ಉದ್ಯಮದ ಬೆಳವಣಿಗೆಗೆ ಪೂರಕವಾದ ಪಠ್ಯ, ಪರೀಕ್ಷಾ ಕ್ರಮವನ್ನು ಅನುಸರಿಸುತ್ತಿದೆ. ಈ ಮೂಲಕ ವಿದ್ಯಾರ್ಥಿಗಳನ್ನು ಇನ್ನಷ್ಟು ಸ್ಪರ್ಧಾತ್ಮಕವಾಗಿ ಸಜ್ಜುಗೊಳಿಸುತ್ತಿದೆ.

ಉದ್ಯಮಿಗಳು ಹಾಗೂ ಶಿಕ್ಷಣ ತಜ್ಞರ ಜತೆ ಸುದೀರ್ಘ ಸಭೆಗಳನ್ನು ನಡೆಸಿದ ವಿಟಿಯು ರೂಪಿಸಿದ ನೂತನ ಪಠ್ಯ ಕ್ರಮ ಹಾಗೂ ಪರೀಕ್ಷಾ ಪದ್ಧತಿ ಬಗ್ಗೆ ಉದ್ಯಮಿಗಳು ಕೂಡ ಸಂತಸ ವ್ಯಕ್ತಪಡಿಸಿದ್ದಾರೆ. ಆರಂಭದಲ್ಲಿ ಕೆಲವರು ವಿದ್ಯಾರ್ಥಿಗಳನ್ನು ದಾರಿ ತಪ್ಪಿಸಿದರು. ಆದರೆ, ಒಟ್ಟಾರೆ ಈ ಹೊಸ ಪಠ್ಯ ಕ್ರಮ ವಿದ್ಯಾರ್ಥಿಗಳು ಹಾಗೂ ಉದ್ಯಮ ಕ್ಷೇತ್ರಕ್ಕೆ ತುಂಬಾ ಅನುಕೂಲಕರವಾಗಿದೆ ಎಂದು ಕುಲಪತಿ ಸಮರ್ಥಿಸಿಕೊಳ್ಳುತ್ತಾರೆ.

■ **ಮೈಸೂರಿನಲ್ಲಿ 'ಬಾಷ್' ಸಹಯೋಗದಲ್ಲಿ ತರಬೇತಿ ಕೇಂದ್ರ**

ಮೈಸೂರಿನಲ್ಲಿ ಎಂಜಿನಿಯರಿಂಗ್, ಎಂ.ಟೆಕ್ ವಿದ್ಯಾರ್ಥಿಗಳು ಹಾಗೂ ಕೈಗಾರಿಕೆಗಳಲ್ಲಿ ಕೆಲಸ ಮಾಡುವಂತಹ ಕಾರ್ಮಿಕರ ಅನುಕೂಲಕ್ಕಾಗಿ ವಿಟಿಯು 'ಬಾಷ್' ಕಂಪನಿಯ ಸಹಯೋಗದಲ್ಲಿ ತರಬೇತಿ ಕೇಂದ್ರವನ್ನು ಸ್ಥಾಪಿಸಿದೆ.

ಖಾರಗ್‌ಪುರ್‌ನ ಐಐಟಿ ಸೇರಿದಂತೆ ದೇಶದ ಹಲವು ಐಐಟಿ, ಎನ್‌ಐಟಿಗಳ ಪ್ರಾಧ್ಯಾಪಕರು ಕೂಡ ಇಲ್ಲಿ ತರಬೇತಿ ಪಡೆಯಲು ಆಗಮಿಸುತ್ತಾರೆ. ನೆರೆಯ ಶ್ರೀಲಂಕಾ, ನೇಪಾಳದಿಂದಲೂ ತರಬೇತಿ ಪಡೆಯಲು ಶಿಕ್ಷಕರು ಇಲ್ಲಿಗೆ ಆಗಮಿಸುತ್ತಿರುವುದು ಕೇಂದ್ರದ ವೈಶಿಷ್ಟ್ಯತೆಯನ್ನು ಎತ್ತಿ ತೋರುತ್ತದೆ. 'ಬಾಷ್' ಕಂಪನಿಯಲ್ಲಿರುವ ಹೈಡ್ರಾಲಿಕ್ ಯಂತ್ರಗಳನ್ನು ಈ ತರಬೇತಿ ಕೇಂದ್ರದಲ್ಲಿ ಅಳವಡಿಸಿ ತರಬೇತಿ ನೀಡಲಾಗುತ್ತಿದೆ. ಹೀಗಾಗಿ, ಇಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಶೇ 100ರಷ್ಟು ಉದ್ಯೋಗ ಗ್ಯಾರಂಟಿ. ಎಂ.ಟೆಕ್‌ನ ಇಂಡಸ್ಟ್ರಿಯಲ್ ಆಟೋಮೇಷಿನ್ ವಿಭಾಗದ ವಿದ್ಯಾರ್ಥಿಗಳು ಕೂಡ ಈ ಕೇಂದ್ರವನ್ನು ಪ್ರಯೋಗಾಲಯವಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ.

■ **ಬೆಂಗಳೂರಿನಲ್ಲಿ ಆ್ಯಪಲ್ ಟ್ರೈನಿಂಗ್ ಸೆಂಟರ್**

ಬೆಂಗಳೂರಿನ ನಾಗರಬಾವಿ ಬಳಿಯ ಅನ್ನಪೂರ್ಣೇಶ್ವರಿ ಲೇಔಟ್‌ನಲ್ಲಿರುವ ವಿಟಿಯು ಪ್ರಾದೇಶಿಕ ಕಚೇರಿ ಬಳಿ ಆ್ಯಪಲ್ ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಸಾಫ್ಟ್‌ವೇರ್, ಹಾರ್ಡ್‌ವೇರ್‌ಗೆ ಸಂಬಂಧಿಸಿದ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆರಂಭಿಸಲಾಗಿದ್ದು, ತರಬೇತಿ ಕೂಡ ನೀಡಲಾಗುತ್ತದೆ. ಆ್ಯಪಲ್ ಫೋನ್, ಟ್ಯಾಬ್ಲೆಟ್, ಕಂಪ್ಯೂಟರ್‌ಗೆ ಸಂಬಂಧಿಸಿದಂತೆ ಬೇರೆಯವರು ಸರ್ಟಿಫಿಕೇಟ್ ಕೋರ್ಸ್ ಮಾಡಲು ಇಲ್ಲಿ ಅವಕಾಶ ಕಲ್ಪಿಸಲಾಗುತ್ತದೆ.

■ **ಥರ್ಮಲ್, ಸೋಲಾರ್ ವಿದ್ಯುತ್ ಸಂಶೋಧನೆಗೆ ಆದ್ಯತೆ**

'ಬಿಸಿಲಿನ ನಗರ' ಕಲಬುರಗಿಯಲ್ಲಿ ಥರ್ಮಲ್ ಹಾಗೂ ಸೋಲಾರ್ ವಿದ್ಯುತ್ ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡಲು ಉದ್ದೇಶಿಸಲಾಗಿದೆ. ಇದಲ್ಲದೆ, ಉದ್ಯಮಿಗಳಾಗಲು ಬಯಸುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕಲಬುರಗಿಯಲ್ಲಿ ಇನ್‌ಕ್ಯುಬಿಷನ್ ಸೆಂಟರ್ ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಈ ಕೇಂದ್ರದಲ್ಲಿ ಒಂದು ವರ್ಷದವರೆಗೆ ಕಂಪ್ಯೂಟರ್, ಇಂಟರ್‌ನೆಟ್ ಮತ್ತಿತರ ಸೌಲಭ್ಯಗಳನ್ನು ಉಚಿತವಾಗಿ ಕಲ್ಪಿಸಲಾಗುತ್ತದೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಪ್ರಾಯೋಗಿಕ ಯೋಜನಾ ವರದಿ ಸಿದ್ಧಪಡಿಸಲು ಅನುಕೂಲವಾಗಲಿದೆ. ಅನಂತರ ಉದ್ದಿಮೆ ಸ್ಥಾಪಿಸಲು ಬ್ಯಾಂಕ್‌ನಿಂದ ಸಾಲ ಸೌಲಭ್ಯ ಒದಗಿಸಿಕೊಡಲು ಕೂಡ ಪ್ರಯತ್ನಿಸಲಾಗುವುದು ಎಂದು ಡಾ. ಮಹೇಶಪ್ಪ ಅವರು ತಿಳಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ದೇಶಕ್ಕೇ ಹೆಮ್ಮೆ: ವಿಸಿ ಮಹೇಶಪ್ಪ

2010ರಲ್ಲಿ ನಾನು ವಿಟಿಯು ಕುಲಪತಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮೈಸೂರು ಹಾಗೂ ಕಲಬುರಗಿ ಪ್ರಾದೇಶಿಕ ಕೇಂದ್ರಗಳಿಗೆ ಹೊಸ ರೂಪ ಕೊಟ್ಟಿದ್ದೇನೆ. ಹಲವಾರು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದೇನೆ. ಬೆಳಗಾವಿಯಲ್ಲಿ ಹೊಸ ಹೊಸ ಕೋರ್ಸ್‌ಗಳನ್ನು ಆರಂಭಿಸಲು ಪ್ರಯತ್ನಿಸಿದ್ದೇನೆ. ಕಲಬುರಗಿಯಲ್ಲಿ ಸರಿಯಾಗಿ ಕ್ಯಾಂಪಸ್ಸೇ ಇರಲಿಲ್ಲ. ಅಲ್ಲಿ ಪಿಜಿ ಬ್ಲಾಕ್, ಬಾಲಕ-ಬಾಲಕಿಯರ ಪ್ರತ್ಯೇಕ ಹಾಸ್ಟೆಲ್, ವಸತಿಗೃಹ, ಅತಿಥಿಗೃಹ ನಿರ್ಮಾಣ ಮಾಡಲಾಗಿದೆ. ಅಲ್ಲದೆ, ಮೌಲ್ಯಮಾಪನ ಕೇಂದ್ರವನ್ನೂ ತೆರೆಯಲಾಗಿದೆ. ಒಟ್ಟಾರೆ ನನ್ನ ಅಧಿಕಾರಾವಧಿಯಲ್ಲಿ ವಿವಿ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿದ್ದೇನೆ.

ಸುಮಾರು 450 ಕೋಟಿ ರೂ. ವೆಚ್ಚದಲ್ಲಿ ಕಟ್ಟಡಗಳ ಸ್ಥಾಪನೆ ಸೇರಿದಂತೆ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ 300 ಕೋಟಿ ರೂ.ಗಳಷ್ಟಿದ್ದ ಕಾರ್ಪಸ್ ಫಂಡ್ ಅನ್ನು 540 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೇನೆ. ಇಡೀ ದೇಶದಲ್ಲಿ ಶೇ 100ರಷ್ಟು ಆದಾಯವನ್ನು ತಾನೇ ಸಂಪಾದಿಸುವ ಮೂಲಕ ಬೆಳವಣಿಗೆ ಕಾಣುತ್ತಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಇಡೀ ದೇಶಕ್ಕೆ ಹೆಮ್ಮೆಯಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಮುದ್ದೇನಹಳ್ಳಿ ದತ್ತು ಪಡೆಯಲು ಚಿಂತನೆ

ಸರ್ ಎಂ. ವಿಶ್ವೇಶ್ವರಯ್ಯ ಜನಿಸಿದ ಮುದ್ದೇನಹಳ್ಳಿಯನ್ನು ದತ್ತು ಪಡೆಯುವ ಮೂಲಕ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ಚಿಂತನೆ ನಡೆಸಲಾಗಿದೆ. ಸರ್‌ಎಂವಿ ಮ್ಯೂಸಿಯಂ ಅಭಿವೃದ್ಧಿಗೆ ಆದ್ಯತೆ ನೀಡುವುದರ ಜತೆಗೆ, ಸಮಾಧಿಯ ಸುತ್ತ ತೋಟ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಗ್ರಾಮದ ಶಾಲೆಗೆ ಕಂಪ್ಯೂಟರ್ ಮತ್ತಿತರ ಸೌಲಭ್ಯಗಳನ್ನು ಒದಗಿಸುವ ಮೂಲಕ ಗ್ರಾಮಸ್ಥರ ಅನುಕೂಲಕ್ಕಾಗಿ ಆರೋಗ್ಯ ಶಿಬಿರಗಳನ್ನು ನಡೆಸಲು ವಿಟಿಯು ನಿರ್ಧರಿಸಿದೆ. ಹಂತ-ಹಂತವಾಗಿ ಗ್ರಾಮವನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸಲಾಗುವುದು ಎಂದು ಡಾ. ಮಹೇಶಪ್ಪ ತಿಳಿಸಿದರು.